# ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು

ವಿಷಯ: ಶ್ರೀಮತಿ.ಆರ್.ಎನ್‌ಕೃಷ್ಣವೇಣಿ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಎಸ್.ಜೆ.(ಸಂಜೆ)ಪಾಲಿಟೆಕ್ನಿಕ್ , ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಅಮಾನತ್ತುಗೊಳಿಸುವ ಬಗ್ಗೆ.

**ಓದಲಾಗಿದೆ:**

1) ಶ್ರೀ.ಆರ್.ಮಂಜುನಾಥ್, ಜಂಟಿ ನಿರ್ದೇಶಕರು ಮತ್ತು ವಿಚಾರಣಾ ಸಮಿತಿ ಅಧ್ಯಕ್ಷರು ಇವರ ಪೂರ್ವಭಾವಿ ಇಲಾಖಾ ವಿಚಾರಣೆ ವರದಿ ದಿ:31/10/2013.

**ಪ್ರಸ್ತಾವನೆ:**

ಓದಲಾದ ಪೂರ್ವಭಾವಿ ಇಲಾಖಾ ವಿಚಾರಣಾ ವರದಿಯನ್ನು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಥಿಯರಿ ಪಠ್ಯ ವಿಷಯದ ಮರುಮೌಲ್ಯಮಾಪನದ ದೋಷಗಳ ಬಗ್ಗೆ ಮಾನ್ಯ ನಿರ್ದೇಶಕರು ಆದೇಶದ ಸಂ.ಡಿಟಿಇ 02 ಇಪಿಎಸ್ 2013 ದಿ:11/10/2013 ರಲ್ಲಿ ಶ್ರೀ.ಆರ್.ಮಂಜುನಾಥ್, ಜಂಟಿ ನಿರ್ದೇಶಕರು (ತನಿಖೆ) ಇವರ ನೇತೃತ್ವದಲ್ಲಿ ಪೂರ್ವಭಾವಿ ವಿಚಾರಣಾ ಸಮಿತಿಯನ್ನು ನೇಮಿಸಲಾಗಿತ್ತು. ಸಮಿತಿಯು ದಿ:31/10/2013 ರಂದು ಸಲ್ಲಿಸಿದ ವರದಿಯಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇ2013 ಪರೀಕ್ಷೆಯ ಫಲಿತಾಂಶ ಪ್ರಕಟವಾದ ನಂತರ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು 32,614 ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಬಯಸಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಿದೆ. ಅದರಲ್ಲಿ 132 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನದ ಅಂಕಗಳನ್ನು ಉತ್ತರ ಪತ್ರಿಕೆಯ ಜೊತೆ ನಮೂದಿಸಿದ ನಂತರ ಮಾರ್ಕ್‌ಲಿಸ್ಟ್‌ನಲ್ಲಿ ಅಂಕಗಳನ್ನು ನಮೂದಿಸಿ ಮೂವರು ಮರುಮೌಲ್ಯಮಾಪಕರು ಸಹಿ ಮಾಡಿರುತ್ತಾರೆ. ಅದರಲ್ಲಿ 11 ಉತ್ತರ ಪತ್ರಿಕೆಗಳ ಅಂಕಗಳು ಸರಿಯಾಗಿ ಮಾರ್ಕ್ಸ್‌ಲಿಸ್ಟ್‌ನಿಂದ ಕಂಪ್ಯೂಟರ್‌ನಲ್ಲಿರುವ ಮರುಮೌಲ್ಯಮಾಪನ ತಂತ್ರಾಂಶಕ್ಕೆ ವರ್ಗಾಯಿಸಲಾಗಿದೆ. ಉಳಿದ 256 ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ 51 ಉತ್ತರ ಪತ್ರಿಕೆಗಳು ಫೋಟೋ ಕಾಪಿ ಮತ್ತು ಮರುಮೌಲ್ಯಪಾಲನಕ್ಕೆ ಸಂಬಂಧ ಪಟ್ಟಿದ್ದಾಗಿರುತ್ತದೆ ಮತ್ತು ಉಳಿದ 205 ಉತ್ತರ ಪತ್ರಿಕೆಗಳು ಮರುಮೌಲ್ಯಮಾಪನಕ್ಕೆ ಮಾತ್ರ ಸಂಬಂಧಿಸಿದ್ದಾಗಿರುತ್ತದೆ. ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ 256 ಉತ್ತರ ಪತ್ರಿಕೆಗಳ ಮಾರ್ಕ್ಸ್‌ಲಿಸ್ಟ್‌ನಲ್ಲಿ ನಮೂದಿಸಿರುವ ಮರು ಮೌಲ್ಯಮಾಪನದ ಅಂಕಗಳನ್ನು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿರುವ ಕಂಪ್ಯೂಟರ್ ಸೆಂಟರ್‌ನಲ್ಲಿ ಮರುಮೌಲ್ಯಮಾಪನಕ್ಕೆಂದೇ ತಯಾರಿಸಿದ ತಂತ್ರಾಂಶದಲ್ಲಿ ಅಂಕಗಳನ್ನು ಕೀಯಿಂಗ್ ಹಂತಗಳಲ್ಲಿ ನಮೂದಿಸುವಾಗ ದುರಾಚಾರವೆಸಗಿರುವುದು ಪೂರ್ವಭಾವಿ ಇಲಾಖಾ ತನಿಖೆಯಿಂದ ಕಂಡು ಬಂದಿರುತ್ತದೆ.

ಸದರಿ ತಂತ್ರಾಂಶವು ಪ್ರಾಥಮಿಕ ಹಂತದಲ್ಲಿ ಬಳಸಲಾಗಿದ್ದು, ಸದರಿ ತಂತ್ರಾಂಶದಲ್ಲಿ ಎರಡು ಬಾರಿ ಮರು ಮೌಲ್ಯಮಾಪನ ಅಂಕಗಳನ್ನು ನಮೂದಿಸುವ ಅವಕಾಶವಿದ್ದು, ಬೇರೆ ಬೇರೆ ಕಂಪ್ಯೂಟರ್‌ನಿಂದ ಹಾಗೂ ಬೇರೆ ಬೇರೆ ವ್ಯಕ್ತಿಗಳಿಂದ ಕೀ ಮಾಡಿಸಬಹುದಾಗಿರುತ್ತದೆ. ನಂತರ ಈ ಎರಡು ಕೀಯಿಂಗ್‌ಗಳೂ ಸರಿಯಾಗಿ ಕೀಯಿಂಗ್ ಆಗಿರುವುದನ್ನು ಖಚಿತ ಪಡಿಸುವ ಅಧಿಕಾರವನ್ನು ಸಿಸ್ಟಂ ಪ್ರೋಗ್ರಾಮರ್ ಇವರಿಗೆ ನೀಡಲಾಗಿದ್ದು, ಅದರಂತೆ ಸಿಸ್ಟಂ ಪ್ರೋಗ್ರಾಮರ್ ರವರು ಕೇವಲ 4 ಮಿಸ್‌ಮ್ಯಾಚ್ ಹೊಂದಿರುವ ಪಟ್ಟಿಯನ್ನು ಸರಿ ಪಡಿಸುವ ಉದ್ದೇಕ್ಕಾಗಿ Master Rights ಅಧಿಕಾರ ಹೊಂದಿ ಮರುಮೌಲ್ಯಮಾಪನ ಅಂಕಗಳ ಕೀಯಿಂಗ್ ಮೇಲುಸ್ತುವಾರಿ

–2

V ch Suspn

ಜವಾಬ್ದಾರಿ ಹೊತ್ತ ಶ್ರೀಮತಿ ಆರ್.ಎನ್.ಕೃಷ್ಣವೇಣಿ ಇವರಿಗೆ ನೀಡಿರುತ್ತಾರೆ. **ಶ್ರೀಮತಿ ಆರ್.ಎನ್.ಕೃಷ್ಣವೇಣಿ** ರವರು 2013ರ ಏಪ್ರಿಲ್/ಮೇ ಥಿಯರಿ ಸೆಮಿಸ್ಟರ್ ಪರೀಕ್ಷೆಗಳ ಮರುಮೌಲ್ಯ ಮಾಪನದ ಅಂಕಗಳ ಕೀಯಿಂಗ್ ಪ್ರಕ್ರಿಯೆ ನಡೆಯುತ್ತಿದ್ದ ಸಂದರ್ಭದಲ್ಲಿ, ತಾಂತ್ರಿಕ ಸಹಾಯಕರಾಗಿ, ತಾಂ.ಪ.ಮಂಡಳಿಯ ಕಂಪ್ಯೂಟರ್ ಕೇಂದ್ರದಲ್ಲಿ **ಸಂಪೂರ್ಣ ಮರು ಮೌಲ್ಯಮಾಪನದ ಅಂಕಗಳ ಕೀಯಿಂಗ್ ಮೇಲುಸ್ತುವಾರಿ ವಹಿಸಿಕೊಂಡಿರುತ್ತಾರೆ.** ಇವರು ಬಿಟಿಇ ಲಿಂಕ್ಸ್ ಸರ್ವರ್ (ಮುಖ್ಯಸರ್ವರ್) ಮತ್ತು ಕೋಡಿಂಗ್ ಸರ್ವರ್‌ಗೆ Access ಮಾಡಲು Master Rights ಹೊಂದಿದ್ದು. ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಗಳಿಗೆ ಸಂಬಂಧಿಸಿದ ವಿಷಯವಾರು ಕೋಡೆಡ್ ನಂಬರ್‌ಗಳನ್ನು ತಿಳಿಯುವ ಅವಕಾಶವಿತ್ತೆಂದು ಇತರರು ನೀಡಿರುವ ಲಿಖಿತ ಹೇಳಿಕೆ ಪೂರ್ವಭಾವಿ ತನಿಖಾ ವರದಿಯಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿದೆ. ಮರು ಮೌಲ್ಯ ಮಾಪನದ ಅಂಕಗಳ ಕೀಯಿಂಗ್ ಕಾರ್ಯಗಳು ದಿನಂಕ: 23-08-2013 ರಂದು ಪೂರ್ಣಗೊಂಡಿದ್ದು, ಕೀಯಿಂಗ್ ಸಂದರ್ಭದಲ್ಲಿ ಕೇವಲ ನಾಲ್ಕು Mismatch ಪ್ರಕರಣಗಳಿದ್ದು ಅವುಗಳನ್ನು ಸರಿಪಡಿಸುವ ಪಟ್ಟಿಯನ್ನು ಶ್ರೀ ಕೆ.ಮಹದೇವಯ್ಯ ರವರು ಅಂದೇ ಶ್ರೀಮತಿ ಆರ್.ಎನ್.ಕೃಷ್ಣವೇಣಿ ಯವರಿಗೆ ನೀಡಿ ಸರಿಪಡಿಸಲು ತಿಳಿಸಿರುತ್ತಾರೆ.ಸದರಿ ನಾಲ್ಕು Mismatch ಪ್ರಕರಣಗಳನ್ನು ಅಲ್ಪಾವಧಿಯಲ್ಲೇ ಸರಿಪಡಿಸಬಹುದಾಗಿದೆ.

ಶ್ರೀಮತಿ ಆರ್ . ಎನ್. ಕೃಷ್ಣವೇಣಿ ಯವರು ದಿನಾಂಕ:22-08-2013 ರಿಂದ ಬಿಟಿಇ ಕೋಡಿಂಗ್ ಸರ್ವರ್‌ಗೆ 16 ಬಾರಿ Access ಮಾಡಿರುವುದು ದಾಖಲೆಗಳಿಂದ ದೃಢಪಟ್ಟಿರುವುದು ಸಂಶಯಕ್ಕೆ ಎಡೆ ಮಾಡಿ ಕೊಟ್ಟಿದೆ. ಈ ಸಂಬಂಧ ಸದರಿಯವರಿಗೆ ನೀಡಿದ ಪೂರಕ ಪ್ರಶ್ನಾವಳಿಯಲ್ಲಿನ ಪ್ರಶ್ನೆಗೆ ಅವರ ಲಿಖಿತ ಪ್ರಶ್ನೆಗಳಿಗೆ ಅಸ್ಪಷ್ಟ ಮತ್ತು ಅಸಮರ್ಪಕ ಉತ್ತರ ನೀಡಿರುತ್ತಾರೆ.ಮರು ಮೌಲ್ಯ ಮಾಪನದ ನಂತರ ಬಿಟಿಇ ಕೋಡಿಂಗ್ ಸರ್ವರ್‌ಗೆ Access ಮಾಡುವ ಯಾವುದೇ ಅವಶ್ಯಕತೆ ಇರುವುದಿಲ್ಲ ಹಾಗು ಅಂತಹ ಸಂದರ್ಭ ಉದ್ಭವಿಸಿದಲ್ಲಿ ಉಪ ನಿರ್ದೇಶಕರವರ ಅನುಮತಿ ಪಡೆದೇ Login ಆಗಬೇಕು, ಆದರೆ ಮರು ಮೌಲ್ಯಮಾಪನದ ಅಂಕಗಳ ಕೀಯಿಂಗ್ ಪ್ರಕ್ರಿಯೆ ಮುಗಿದ ನಂತರ ಅವರು ಬಿಟಿಇ ಕೋಡಿಂಗ್ ಸರ್ವರ್‌ಗೆ Login ಆಗಿರುವ ಉದ್ದೇಶ ನೋಂದಣಿ ಸಂಖ್ಯೆಗೆ ಸಂಬಂಧಿಸಿದ ಕೋಡೆಡ್ ಸಂಖ್ಯೆಗಳನ್ನು ತಿಳಿಯುವ ಉದ್ದೇಶ ವಿರಬಹುದೆಂಬ ವಿಚಾರವನ್ನು ಶ್ರೀ ಕೆ.ಮಹದೇವಯ್ಯ ರವರು ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಸಮಿತಿಯು ಮರುಮೌಲ್ಯಮಾಪನ ಕೀಯಿಂಗ್ ಮಾಡಿದಂತಹ ಈ ಕೆಳಗೆ ಸೂಚಿಸಿದ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಗಳನ್ನು ಸಹ ವಿಚಾರಣೆಗೆ ಒಳಪಡಿಸಲಾಗಿತ್ತು.

1. ಶ್ರೀ ಆನಂದ ಪೂಜಾರಿ, ಜಂಟಿ ನಿರ್ದೇಶಕರು, ತಾಂ.ಶಿ.ಪ.ಮಂ.
2. ಶ್ರೀಮತಿ ರಾಗಿಣಿ, ಉಪ ನಿರ್ದೇಶಕರು
3. ಶ್ರೀ ಟಿ.ಹರೀಶ್, ಸಹಾಯಕ ನಿರ್ದೇಶಕರು
4. ಡಾ// ಡಿ.ಎಸ್.ಪ್ರಕಾಶ್, ಸಿಸ್ಟಂ ಅನಾಲಿಸ್ಟ್
5. ಶ್ರೀ ಕೆ.ಮಹದೇವಯ್ಯ, ಪ್ರೊಗ್ರಾಮರ್
6. ಶ್ರೀ ನಾಗೇಶಾಚಾರಿ, ಹಿರಿಯ ತಾಂತ್ರಿಕ ಸಹಾಯಕರು
7. ಶ್ರೀ ಆರ್.ನಾರಾಯಣ ಸ್ವಾಮಿ, ಹಿರಿಯ ತಾಂತ್ರಿಕ ಸಹಾಯಕರು
8. ಶ್ರೀ ಪಿ.ಎಸ್.ಬಾಬು, ಹಿರಿಯ ತಾಂತ್ರಿಕ ಸಹಾಯಕರು

-3

9. ಶ್ರೀಮತಿ ಆರ್.ಎನ್.ಕೃಷ್ಣವೇಣಿ, ಆ.ಶ್ರೇ.ಉ
10. ಶ್ರೀ ಸಿ.ಕೆ.ಪುರುಷೋತ್ತಮ, ಪ್ರ.ದ.ಸ
11. ಶ್ರೀಮತಿ ನಾರಾಯಣಮ್ಮ, ಪ್ರ.ದ.ಸ
12. ಶ್ರೀಮತಿ ರಾಣಿ.ಬಿ, ಗ್ರಂಥಪಾಲಕರು, ಇಸಿಎಸ್ ವಿಭಾಗ
13. ಶ್ರೀ ಉಮಾಪತಿ, ಹಿ.ಕೆ.ಪಿ.ಒ
14. ಶ್ರೀ ಪರಮೇಶ್ವರಪ್ಪ, ಹಿ.ಕೆ.ಪಿ.ಒ
15. ಶ್ರೀಮತಿ ವೀಣಾಭಾಯಿ ಭಟ್, ಹಿ.ಕೆ.ಪಿ.ಒ
16. ಶ್ರೀಮತಿ ವಾಣಿ, ಪ್ರ.ದ.ಸ
17. ಶ್ರೀ ಆನಂದ್, ಬೋಧಕರು
18. ಶ್ರೀ ಕುಮಾರ ಆರಾಧ್ಯ, ಬೋಧಕರು
19. ಶ್ರೀ ಗುರುಮೂರ್ತಾಚಾರ್, ಬೋಧಕರು
20. ಶ್ರೀ ಹರೀಶ್, ಕೆ.ಎಂ. ಅಕುಶಲ ಅರೆಕಾಲಿಕ ಕೆಲಸಗಾರರು
21. ಶ್ರೀಮತಿ ಕವಿತಾ, ಅಕುಶಲ ಅರೆಕಾಲಿಕ ಕೆಲಸಗಾರರು
22. ಶ್ರೀಮತಿ ಪುಷ್ಪಾ, ಅಕುಶಲ ಅರೆಕಾಲಿಕ ಕೆಲಸಗಾರರು
23. ಶ್ರೀ ಮೋಹನ್‌ರಾವ್, ಅಕುಶಲ ಅರೆಕಾಲಿಕ ಕೆಲಸಗಾರರು
24. ಶ್ರೀ ಚೇತನ್.ಕೆ ಅಕುಶಲ ಅರೆಕಾಲಿಕ ಕೆಲಸಗಾರರು
25. ಶ್ರೀ ನಾಗಯ್ಯ, ಸೇವಕರು

ಮೇಲ್ಕಂಡ ಅಧಿಕಾರಿ/ಸಿಬ್ಬಂದಿಯವರ ಹೇಳಿಕೆ ಮತ್ತು ಸಂಬಂಧಪಟ್ಟ ದಾಖಲೆ ಹಾಗೂ ಪೂರ್ವಭಾವಿ ವಿಚಾರಣಾ ವರದಿಯನ್ನು ಅವಲೋಕಿಸಿದಾಗ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ, ತಾಂತ್ರಿಕ ಪರೀಕ್ಷಾ ಮಂಡಳಿಯ ಕಂಪ್ಯೂಟರ್ ಸೆಂಟರ್ ನಲ್ಲಿ 2013 ರ ಏಪ್ರಿಲ್/ಮೇ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ **132 ವಿದ್ಯಾರ್ಥಿಗಳ 256 ಉತ್ತರ ಪತ್ರಿಕೆಗಳನ್ನು** ಮರುಮೌಲ್ಯಮಾಪನ ಮಾಡಿದ ನಂತರದ ಅಂಕಗಳನ್ನು ಮರುಮೌಲ್ಯಮಾನ ತಂತ್ರಾಂಶಕ್ಕೆ ವರ್ಗಾಯಿಸುವಾಗ ಅನುತ್ತೀರ್ಣ ಅಂಕಗಳ ಬದಲಿಗೆ ಉತ್ತೀರ್ಣ ಅಂಕಗಳನ್ನು ನಿಯಮಬಾಹಿರವಾಗಿ ಹಾಗು ಉದ್ದೇಶಪೂರ್ವಕವಾಗಿ ಕೀಯಿಂಗ್ ಮಾಡುವ ಮುಖಾಂತರ ದುರಾಚಾರವೆಸಗಿರುವುದು ದೃಢಪಟ್ಟಿರುತ್ತದೆ. ಮರುಮೌಲ್ಯ ಮಾಪನದ ಅಂಕಗಳ ಕೀಯಿಂಗ್ ಸಮಯದಲ್ಲಿ ತಾಂತ್ರಿಕ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಆರ್.ಎನ್.ಕೃಷ್ಣವೇಣಿ ಇವರು ಬಿಟಿಇ ಕೋಡೆಡ್ ಸರ್ವರ್‌ನ Login ID ಮತ್ತು Password ನ ಗೌಪ್ಯತೆ ಕಾಪಾಡುವಲ್ಲಿ ವಿಫಲರಾಗಿವುದು ಸದರಿಯವರಇವರ ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತಿದೆ.
ಆದುದರಿಂದ ಶ್ರೀಮತಿ ಆರ್.ಎನ್.ಕೃಷ್ಣವೇಣಿ, ಪ್ರಸ್ತುತ ಆಯ್ಕೆ ಶ್ರೇಣಿ ಉಪನ್ಯಾಸಕರು(ಯಾಂತ್ರಿಕ), ಎಸ್.ಜೆ.ಸರ್ಕಾರಿ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿ ಹೊಣೆಗಾರರನ್ನಾಗಿ ಮಾಡಬಹುದಾಗಿರುತ್ತೆಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿಯವರ ಮೇಲಿನ ಆರೋಪವನ್ನು ಪರಿಶೀಲಿಸಿದಾಗ

-4

ಅವರ ವರ್ತನೆಯು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿರುವುದು ಮತ್ತು ಕರ್ತವ್ಯದಲ್ಲಿ ಪ್ರಾಮಾಣಿಕತೆ, ಸತ್ಯ, ನಿಷ್ಠೆ ತೋರಿಸುವುದರಲ್ಲಿ ವಿಫಲರಾಗಿ ಗೌಪ್ಯತೆ ಕಾಪಾಡುವಲ್ಲಿ ವಿಫಲರಾಗಿರುವುದು, ಕರ್ತವ್ಯ ಚ್ಯುತಿ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii) ನ್ನು ಉಲ್ಲಂಘಿಸಿದ ಆರೋಪಕ್ಕೆ ಒಳಗಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಡಿಟಿಇ 13 ಡಿಇಕ್ಯೂ(1) 2013, ದಿನಾಂಕ: 31-10-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀಮತಿ ಆರ್.ಎನ್.ಕೃಷ್ಣವೇಣಿ, ತಾಂತ್ರಿಕ ಸಹಾಯಕರು, ಕೀಯಿಂಗ್ ಮೇಲುಸ್ತುವಾರಿ ಹಾಗೂ ಹಾಲಿ **ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್ , ಬೆಂಗಳೂರು ಇವರು ಮರು ಮೌಲ್ಯಮಾಪನದ ಅಂಕಗಳ ಕೀಯಿಂಗ್ ಹಂತದಲ್ಲಿ ನಡೆದಿದೆ ಎನ್ನಲಾದ ಪರೀಕ್ಷಾ ದುರಾಚಾರದಲ್ಲಿ ಭಾಗಿಯಾಗಿರುವ ಆರೋಪವು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಸದರಿಯವರು**

ಕರ್ನಾಟಕ ನಾಗರೀಕ ಸೇವಾ [ನಡತೆ] ನಿಯಮಾವಳಿ 1966 ರ ನಿಯಮ 3(1)ರ ಉಪನಿಯಮ (i) (ii) ಮತ್ತು (iii) ನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಮತ್ತು ನಿರ್ಲಕ್ಷತೆ ತೋರಿರುವ ಪ್ರಯುಕ್ತ ಅವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀಮತಿ ಆರ್.ಎನ್.ಕೃಷ್ಣವೇಣಿ, **ಆಯ್ಕೆ ಶ್ರೇಣಿ ಉಪನ್ಯಾಸಕರು,**ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ಮತ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ 10(1) (ಡಿ) ಅನ್ವಯ ಈ ತಕ್ಷಣದಿಂದಲೇ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಸದರಿಯವರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಸದರಿಯವರು ಇಲಾಖೆಯ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

**ನಿರ್ದೇಶಕರು**
**ನೇಮಕಾತಿ ಹಾಗೂ ಶಿಸ್ತು ಪ್ರಾಧಿಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**
31/10/13

**ಇವರಿಗೆ,**
ಶ್ರೀಮತಿ ಆರ್.ಎನ್.ಕೃಷ್ಣವೇಣಿ, **ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್ , ಬೆಂಗಳೂರು**

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:-**
**<u>ಪ್ರತಿ: ಮಾಹಿತಿಗಾಗಿ.</u>**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಕೊಠಡಿ ಸಂ: 252, 2ನೇ ಮಹಡಿ, ವಿಧಾನಸೌಧ, ಬೆಂಗಳೂರು.

-5

2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ [ಉನ್ನತ ಶಿಕ್ಷಣ], ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
4. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
5. ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಬೆಂಗಳೂರು.
6. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
7. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
8. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
9. ನಿರ್ದೇಶಕರ ಆಪ್ತಶಾಖೆಗೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
10. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ತಾಂತ್ರಿಕ ಶಿಕ್ಷಣ ಇಲಾಖೆಯ ಅಂತರ್‌ಜಾಲ (ಇಂಟರ್‌ನೆಟ್) ಪ್ರಕಟಿಸಲು.
12. ಇಎಸ್‌ಟಿ (1)ಎ, ಇಎಸ್‌ಟಿ (2) ಎ , 9, 7, ವಿಭಾಗಗಳಿಗೆ.
13. ಕಛೇರಿ ಪ್ರತಿ.

V ch Suspn